ಹಾಗೆ ದೇವಿಗೂ ವಸ್ತ್ರವನ್ನು ಇಡುತ್ತಾರೆ. ದೇವಿಯ ಪೀಠದ ಕೆಳಗಿನಿಂದ ಈ ಸಮಯದಲ್ಲಿ ಮಾತ್ರ ನೀರು ಹರಿದು ಹೋಗುತ್ತದಂತೆ. ಮೂರು ದಿನಗಳ ನಂತರ ನಿಂತುಹೋಗುತ್ತದೆ. ಈ ದಿನಗಳಲ್ಲಿ ಬ್ರಹ್ಮಪುತ್ರಾ ಕೂಡ ಕೆಂಪಾಗಿ ಹರಿಯುತ್ತದೆ ಎಂದೂ ಅಲ್ಲಿನ ಜನ ಹೇಳುತ್ತಾರೆ. ದೇವಿಯ ಸ್ರಾವ ತಡೆಯಲು ಉಪಯೋಗಿಸಲಾದ ಬಟ್ಟೆಯನ್ನು ಸಣ್ಣ ಸಣ್ಣ ಚೂರುಗಳಾಗಿ ಹರಿದು ಭಕ್ತರಿಗೆ ಪ್ರಸಾದವಾಗಿ ಹಂಚಲಾಗುತ್ತದಂತೆ. ಆದರೆ ಇದಕ್ಕಾಗಿ ದೇವಾಲಯದಲ್ಲಿ ನಮ್ಮ ಹೆಸರನ್ನು ಬರೆಸಿರಬೇಕು. ಆ ವಸ್ತ್ರ ಪ್ರಸಾದಕ್ಕೂ ಡಿಮ್ಯಾಂಡ್ ಬಹಳ. ಒಂದುಸಣ್ಣ ಚೂರು ಸಿಕ್ಕರೂ ಸರ್ವಶ್ರೇಷ್ಠ ಎಂದು ತಿಳಿಯುತ್ತಾರಂತೆ. ಆ ವಸ್ತ್ರದ ನೂಲಿನೆಳೆ ಸಿಕ್ಕರೂ ಅದನ್ನು ತಾಯಿತದಲ್ಲಿ ಹಾಕಿ ಕತ್ತಿಗೆ ಧರಿಸುತ್ತಾರಂತೆ. ದೇವಿ ರಜಸ್ವಾಲೆಯಾದಾಗ ಅವಳ ದರ್ಶನಕ್ಕೆ ಹಾಗೂ ವಸ್ತ್ರ ಪ್ರಸಾದಕ್ಕೆ ಲಕ್ಷಾಂತರ ಭಕ್ತರು ಸೇರುತ್ತಾರಂತೆ.

### ಶಿಲ್ಲಾಂಗ್ ಕಡೆಗೆ ಪಯಣ

ಗುವಾಹಟಿಗೆ ಮೇಘಾಲಯ ಹತ್ತಿರದ ರಾಜ್ಯ. ಮೇಘಾಲಯದ ರಾಜಧಾನಿ ಶಿಲ್ಲಾಂಗ್‌ಗೆ ಮೂರೂವರೆ ತಾಸಿನ ಪಯಣ. ನಮ್ಮ ಪ್ರಯಾಣ ಶಿಲ್ಲಾಂಗ್ ಕಡೆ ತಿರುಗಿತು. ಗುವಾಹಟಿ ಶಿಲ್ಲಾಂಗ್ ನಡುವಿನ ದಾರಿಯಲ್ಲಿ ಉಮಾಯಮ್ ಸರೋವರ ಇದೆ. ಬಹುದೊಡ್ಡ ಸರೋವರ. ಸುತ್ತಲೂ ಹಸಿರು, ಮೇಘಾಚ್ಛಾದಿತ ಆಕಾಶ, ಬೆಟ್ಟಗುಡ್ಡಗಳು ಪ್ರಕೃತಿಯ ಸಿರಿತಾಣ. ನಯನಮನೋಹರ.

ಶಿಲ್ಲಾಂಗ್ ತಲುಪಿದಾಗ ರಾತ್ರಿ ಏಳೂವರೆ. ಮೊದಲೇ ಕಾಯ್ದಿರಿಸಿದ್ದ ಆರ್ಕಿಡ್ ಅನೆಕ್ಸ್ ಹೋಟೆಲ್‌ನಲ್ಲಿ ಚೆಕ್ ಇನ್ ಆಗಿ ಕೈಕಾಲು ತೊಳೆಯಲು ಹೋದರೆ ಕೊರೆವ ಚಳಿ. 1416 ಡಿಗ್ರಿ ಉಷ್ಣಾಂಶ. ಹೋಟೆಲ್ ರೂಮ್‌ನ ನೆಲವೆಲ್ಲ ಮರದ ಹಾಸು ಬಳಸಿ ಮಾಡಿದ್ದರೂ ತಣ್ಣಗೆ ಕೊರೆವ ಪಾದಗಳು ನಡುಗಿಸುವ ಚಳಿ. ಬಿಸಿಬಿಸಿ ಟೀ ಕುಡಿದು ಹಾಗೆಯೇ ಶಿಲ್ಲಾಂಗ್ ಮುಖ್ಯಬೀದಿಗಳಲ್ಲಿ ಅಡ್ಡಾಡಿ ಬಂದೆವು. ರಾಜಧಾನಿಯಾದರೂ ಪುಟ್ಟ ಊರು. ಕಿರಿದಾದ ರಸ್ತೆಗಳು. ಎಲ್ಲೆಲ್ಲಿ ನೋಡಿದರೂ ಬೆಟ್ಟಗುಡ್ಡಗಳು, ಹಿಮಾಚ್ಛಾದಿತ ಆಗಸ, ಹಸಿರೋ ಹಸಿರು.

**ಗುವಾಹಟಿಯಿಂದ ಚಿರಾಪುಂಜಿಯವರೆಗಿನ ಪ್ರಯಾಣ ಅದ್ಭುತ ಪ್ರೇಕ್ಷಣೀಯ ಅನುಭವ ನೀಡುತ್ತದೆ. ಹಸಿರು ತುಂಬಿ ನಗುವ ಪ್ರಕೃತಿ, ಚಕ್ ಎಂದು ಎದುರಾಗುವ ಸುಂದರ ಜಲಪಾತ, ಅಲ್ಲೊಂದು ದೇವಸ್ಥಾನ, ಇಲ್ಲೊಂದು ಗುಹಾತಾಣ, ಏನುಂಟು ಏನಿಲ್ಲ...!**

ಮಾರನೇ ದಿನ ಬೆಳಗ್ಗೆ ಚಿರಾಪುಂಜಿಗೆ ಟೆಂಪೋ ಟ್ರಾವೆಲರ್‌ನಲ್ಲಿ ಹೊರಟೆವು. ಭಾರತದ ಅತ್ಯಧಿಕ ಮಳೆ ಬೀಳುವ ತಾಣ ಚಿರಾಪುಂಜಿ ಎಂದು ನಾವೆಲ್ಲ ಹೈಸ್ಕೂಲ್‌ನಲ್ಲಿ ಓದಿದ್ದೆವಲ್ಲ, ಆ ವಿಸ್ಮಯ ತಾಣಕ್ಕೆ ಭೇಟಿನೀಡಲು ಕಾತುರರಾಗಿದ್ದೆವು.

ಆ ದಿನದ ಮೊದಲ ಪ್ರೇಕ್ಷಣೀಯ ಸ್ಥಳ ಎಲಿಫೆಂಟಾ ಫಾಲ್ಸ್. ಅಲ್ಲಿ ಮೂರು ಜಾಗದಲ್ಲಿ ಜಲಪಾತ ಇದೆ. ನಮ್ಮ ಜೋಗ್‌ನಂತೆ ರಭಸ ಇಲ್ಲದಿದ್ದರೂ ಜುಳುಜುಳು ಹರಿಯುವ ನೀರನ್ನು ನೋಡುವುದೇ ಸೊಗಸು. ನೀರು ಬೀಳುವ ಹೊಂಡದಲ್ಲಿ ಮೋಟರ್ ಬೋಟ್ ಏರಿ ಅಲ್ಲಿ ಒಂದು ಸುತ್ತು ಹೋಗಿ ಬರಬಹುದು. ಜನರ ಕಲರವ ಜಲಪಾತದ ಜುಳುಜುಳು ಸದ್ದಿನಿಂದ ಪರಿಸರ ತುಂಬಿಹೋಗಿತ್ತು. ಸಾಕಾಗುವಷ್ಟು ನೀರಾಟವಾಡಿ ಮುಂದೆ ಹೊರಟೆವು. ಶಾಪಿಂಗ್‌ಗೂ ಅಲ್ಲಿ ಅವಕಾಶ ಇದೆ. ಮಹಿಳೆಯರ ಪರ್ಸ್, ಶಾಲು, ಮರದ ಆಟಿಕೆಗಳು ಮುಂತಾದವು ದೊರೆಯುತ್ತವೆ.

ಮಧ್ಯಾಹ್ನದ ಹೊತ್ತಿಗೆ ಮೌಸ್ಮಾಯಿ ಗುಹೆಗಳು ಎಂಬ ಜಾಗಕ್ಕೆ ಬಂದೆವು. ಇಲ್ಲಿ ಕಲ್ಲು ಬಂಡೆಗಳು ನೀರಿನಿಂದ ಕೊರೆದು ಗುಹೆಯಾಗಿದೆ. ಸುಮಾರು ನೂರು ಮೀಟರ್ ಉದ್ದದ ಗುಹೆ. ಈ ತುದಿಯಿಂದ ಹೊರಟು ಆ ತುದಿಯಿಂದ ಆಚೆ ಬರಬೇಕು. ಮೈಯನ್ನು ಕುಗ್ಗಿಸಿ, ಹಾವಿನಂತೆ ಹರಿಯುತ್ತ ಮುಳ್ಳುಹಂದಿಯಂತೆ ನುಗ್ಗುತ್ತ ಸಾಗಬೇಕು. ಸಾಹಸಮಯವಾದ ಪಯಣ. ಕಲ್ಲುಕೊರೆದ ದಾರಿ. ಹತ್ತುತ್ತ ಇಳಿಯುತ್ತ ಸಾಗಬೇಕು. ಸ್ಥೂಲಕಾಯದವರಿಗೆ ಕಷ್ಟವೇ ಸರಿ.

ಆ ಜಾಂಬವಂತನ ಗುಹೆಯಿಂದ ಹೊರಬಂದು ಕೊಂಚ ಸುಧಾರಿಸಿಕೊಂಡು ಅಲ್ಲೇ ಇದ್ದ ಅಂಗಡಿಗಳಲ್ಲಿ ಚುರಮುರಿ ತಿಂದು ಮತ್ತೆ ಪಯಣ ಮುಂದುವರಿಯಿತು. ಮಧ್ಯಾಹ್ನ ಎರಡು ಗಂಟೆಗೆ ಚಿರಾಪುಂಜಿ ತಲುಪಿದಾಗ ರಣರಣ ಬಿಸಿಲು. ಮಳೆಯ ಸೂಚನೆಯೂ ಇಲ್ಲ. ನಾವೇನೋ ಮಳೆ ಸುರಿಯುತ್ತಿರುತ್ತದೆ ಎಂದು ಏನೇನೋ ಊಹಿಸಿಕೊಂಡಿದ್ದೆವು. ಡ್ರೈವರ್ ಹೇಳಿದ ಮೇಲೆಯೇ ಅದೇ ಚಿರಾಪುಂಜಿ ಎಂದು ಗೊತ್ತಾದದ್ದು! ಮಳೆ ಇಲ್ಲದಿದ್ದರೂ ಹಸಿರಿಗೆ ಕೊರತೆ ಇರಲಿಲ್ಲ. ತೇಲುವ ಮೋಡಗಳು, ಮಂಜುಮುಸುಕಿದ ಬೆಟ್ಟಗುಡ್ಡಗಳಿಂದಾಗಿ ನಾವು ಯಾವುದೋ ಲೋಕದಲ್ಲಿ ಇದ್ದೇವೆ ಎಂಬಂತೆ ಅನಿಸಿದ್ದರಲ್ಲಿ ಅಚ್ಚರಿಯಿಲ್ಲ.

ಅಲ್ಲಿಂದ ಮತ್ತೆ ಶಿಲ್ಲಾಂಗ್‌ಗೆ ವಾಪಸ್ ಹೊರಟೆವು. ಮರಳುವ ದಾರಿಯಲ್ಲಿ 'ಸೆವೆನ್ ಸಿಸ್ಟರ್ಸ್' ಎನ್ನುವ ಜಲಪಾತ ನಮ್ಮನ್ನು ನೋಡಿ ನಕ್ಕಿತು. ಅಬ್ಬರವಿಲ್ಲದೆ ತಣ್ಣಗೆ ಹರಿಯುತ್ತಿತ್ತು. ಅಲ್ಲಿಂದ ಮುಂದೆ ಮತ್ತೊಂದು ಜಲಪಾತ. ಒಂದೇ ಧಾರೆಯಲ್ಲಿ ಹಾಲಿನಷ್ಟು ಬಿಳುಪಾಗಿ ಬೀಳುತ್ತಿತ್ತು. ನೀರು ಕೆಳಗೆ ಹೊಂಡದಲ್ಲಿ ಬಿದ್ದಮೇಲೆ ನೀಲಿಯಾಗಿ ಕಾಣುತ್ತಿದ್ದುದೇ ಸೋಜಿಗ. ಅಲ್ಲಿಂದ ಸೂರ್ಯಾಸ್ತದ ಪಾಯಿಂಟ್‌ನಲ್ಲಿ ನೇಸರ ತನ್ನ ಕೆಲಸ ಮುಗಿಸಿ ಮನೆಗೆ ಹೋಗುವುದನ್ನು ಕಣ್ತುಂಬಿಕೊಂಡು ಶಿಲ್ಲಾಂಗ್ ತಲುಪಿದಾಗ ರಾತ್ರಿ ಎಂಟೂವರೆ.

ಅಲ್ಲಿ ಸೂರ್ಯಾಸ್ತ ಸಂಜೆ ನಾಲ್ಕಕ್ಕೆ. ಐದು ಗಂಟೆಗೆಲ್ಲ ಏನೇನೂ ಕಾಣದ ಕತ್ತಲೆ ಆವರಿಸಿರುತ್ತದೆ.

ರಾತ್ರಿ ಹೋಟೆಲ್‌ನಲ್ಲಿ ಸುಗ್ರಾಸ ಭೋಜನ ಸವಿದು ಬೆಚ್ಚಗೆ ಹೊದ್ದು ಮಲಗಿದವರಿಗೆ ಅದುವರೆಗೆ ಸುತ್ತಾಡಿ ಬಂದ ಎಷ್ಟೆಲ್ಲ ಪ್ರೇಕ್ಷಣೀಯ ಜಾಗಗಳು ಕನಸೋ ನನಸೋ ಗೊತ್ತಾಗದ ಹಾಗೆ ಮನಸಲ್ಲಿ ಸರಿದುಹೋಗುತ್ತಿದ್ದವು. ■



